(2) ವಿವಿಧ ಪ್ರದೇಶಗಳ 12 ಅಧಿನಿಯಮಗಳನ್ನು ತಿದ್ದುಪಡಿ ಮಾಡುವುದಕ್ಕೆ ಮತ್ತು ರಾಜ್ಯದಾದ್ಯಂತ ಉಪಬಂಧಗಳನ್ನು ವ್ಯಾಪಿಸುವುದಕ್ಕೆ

– ಶಿಫಾರಸ್ಸು ಮಾಡಿದೆ.

1. ಬಾಂಬೆ ಹಿಂದೂ ವಾರಸುದಾರರ ಪರಿಹಾರ ಅಧಿನಿಯಮ, 1866 (1866ರ ಬಾಂಬೆ ಅಧಿನಿಯಮ VII).

III ನೇ ಪಟ್ಟಿಯ 5ನೇ ನಮೂದಿನಡಿಯಲ್ಲಿ ಬರುವ ಈ ಅಧಿನಿಯಮವು ರಾಜ್ಯದ ಬೆಳಗಾಂ ಪ್ರದೇಶದಲ್ಲಿ ಜಾರಿಯಲ್ಲಿದೆ. ಈ ಅಧಿನಿಯಮದ ಪ್ರಸ್ತಾವನೆಯಲ್ಲಿ ಈ ಕೆಳಕಂಡಂತೆ ಓದಲಾಗಿದೆ:

"ಜಾರಿಯಲ್ಲಿರುವ ಕಾನೂನಿಗೆ ಅನುಗುಣವಾಗಿ, ಬಾಂಬೆ ಉಚ್ಚ ನ್ಯಾಯಾಲಯವು ತನ್ನ ಸಾಮಾನ್ಯ ಮೂಲ ನಾಗರಿಕ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವಲ್ಲಿ ಹಿಂದುಗಳಿಗೆ ಅನ್ವಯವಾಗುವಂತೆ, ಯಾವೊಬ್ಬ ಮಗ ಅಥವಾ ಮೊಮ್ಮಗನು ಆತನು ಅಂಥ ಮಗ ಅಥವಾ ಮೊಮ್ಮಗನಾಗಿದ್ದನೆ ಎಂಬ ಕಾರಣ ಮಾತ್ರದಿಂದಲೇ, ಮೃತ ಹಿಂದು ಒಬ್ಬನ ಮಗ ಅಥವಾ ಮೊಮ್ಮಗನು ತನ್ನ ಪೂರ್ವಜರ ಋಣಗಳಿಗೆ ಬಾಧ್ಯಸ್ಥನಾಗತಕ್ಕದ್ದಲ್ಲ ಮತ್ತು ಮೃತನ ಸ್ವತ್ತನ್ನು ಸ್ವೀಕರಿಸಿರುವ ಮೃತ ಹಿಂದುವಿನ ಯಾವೊಬ್ಬ ಮಗ, ಮೊಮ್ಮಗ ಅಥವಾ ವಾರಸುದಾರನು, ಆ ಸಂದರ್ಭದಿಂದಾಗಿ ಮಾತ್ರವೇ, ತಾನು ಸ್ವೀಕರಿಸಿದ ಸ್ವತ್ತಗಳ ಮೊತ್ತಕ್ಕಿಂತ ಮಿಗಿಲಾಗಿ, ತನ್ನ ಪೂರ್ವಜರ ಋಣಗಳಿಗೆ ಬಾಧ್ಯಸ್ಥನಾಗತಕ್ಕದ್ದಲ್ಲ ಮತ್ತು ಹಿಂದು ವಿಧವೆಯನ್ನು ವಿವಾಹವಾಗುವ ಯಾವೊಬ್ಬ ವ್ಯಕ್ತಿಯು ಅಂಥ ವಿವಾಹದ ಪರಿಣಾಮವಾಗಿ ಆಕೆಯ ಮುಂಚಿನ ಅಥವಾ ಯಾವುದೇ ಹಿಂದಿನ ಪತಿಯ ಋಣಗಳಿಗೆ ಬಾಧ್ಯಸ್ಥನಾಗತಕ್ಕದ್ದಲ್ಲವಾದ್ದರಿಂದ;

ಮತ್ತು ಸದರಿ ಉಚ್ಚ ನ್ಯಾಯಾಲಯದ ಸಾಮಾನ್ಯ ಮೂಲ ನಾಗರಿಕ ಅಧಿಕಾರ ವ್ಯಾಪ್ತಿಯ ಸ್ಥಳೀಯ ಮಿತಿಗಳಿಗೆ ಮೀರಿದ ಸ್ಥಳಗಳಲ್ಲಿ ಅಧಿಕಾರ ವ್ಯಾಪ್ತಿಯನನು ಚಲಾಯಿಸುವ ಸಿವಿಲ್ ಕೋರ್ಟ್‌ಗಳ ಮೂಲಕ ಹಿಂದುಗಳಿಗೆ ಒಂದು ಪ್ರತ್ಯೇಕ ಕಾನೂನು ಅನ್ವಯ ಮಾಡುವುದರಿಂದ ಮತ್ತು ಅಂಥ ಇತರ ನ್ಯಾಯಾಲಯಗಳ ಮೂಲಕ ಅನ್ವಯಿಸಲಾದ ಕಾನೂನನ್ನು ತಿದ್ದುಪಡಿ

ಮಾಡುವುದು ಮತ್ತು ಆ ಸಂಬಂಧದಲ್ಲಿನ ಕಾನೂನನ್ನು ಬಾಂಬೆ ಪ್ರೆಸಿಡೆನ್ಸಿ ಯುದ್ದಕ್ಕೂ ಏಕರೂಪವಾಗಿ ಮಾಡುವುದು ಯುಕ್ತವಾಗಿರುವುದರಿಂದ;

ಮತ್ತು ಒಬ್ಬ ಹಿಂದುವಿಗೆ ಆತನು ಹುಟ್ಟುವ ಮುಂಚೆಯೇ ಅಥವಾ ಆತನು 25 ವರ್ಷಗಳ ವಯಸ್ಸಿನ ಒಳಗಿನವನಾಗಿರುವಾಗ ಒಪ್ಪಂದವಾದ ಕುಟುಂಬ ಸಾಲಗಳಿಗೆ ಬಾಧ್ಯಸ್ಥನಾಗುವುದನ್ನು ಮಿತಿಗೊಳಿಸುವುದು ಯುಕ್ತವಾಗಿರುವುದರಿಂದ;'

ಇದು ಒಬ್ಬ ಮೃತ ಹಿಂದುವಿನ ಮಗ, ಮೊಮ್ಮಗ ಅಥವಾ ವಾರಸುದಾರರನ್ನು ಆತನ ಪೂರ್ವಜರ ಋಣಗಳ ಹೊಣೆಯನ್ನು ಮತ್ತು ಹಿಂದು ವಿಧವೆಯ ಎರಡನೇ ಪತಿಗೆ ಆಕೆಯ ಹಿಂದಿನ ಪತಿಯ ಋಣ ಮುಂತಾದವುಗಳ ಹೊಣೆಯನ್ನು ಮಿತಿಗೊಳಿಸುತ್ತದೆ. ಏಕಸದಸ್ಯ ಸಮಿತಿಯ ಸಲಹೆಯಂತೆ ಇದನ್ನು ಇಡೀ ರಾಜ್ಯಕ್ಕೆ ವ್ಯಾಪಕಗೊಳಿಸುವುದು ಅಪೇಕ್ಷಣೀಯ ವೆಂದು ಪರಿಗಣಿಸಲಾಗಿದೆ.

2. ಬಾಂಬೆ ಬಹಿಷ್ಕಾರ ನಿಷೇಧ ಅಧಿನಿಯಮ, 1949ರಲ್ಲಿ (ಬಾಂಬೆ ಆಕ್ಟ್ XLII ಆಫ್ 1949).–

III ನೇ ಪಟ್ಟಿಯ 3 ಮತ್ತು 23ನೇ ನಮೂದುಗಳಡಿಯಲ್ಲಿ ಬರುವ ಈ ಅಧಿನಿಯಮವು ರಾಜ್ಯದ ಬೆಳಗಾಂ ಪ್ರದೇಶದಲ್ಲಿ ಜಾರಿಯಲ್ಲಿದ್ದು, ಕೆಲವು ಸಮುದಾಯಗಳಲ್ಲಿ ತನ್ನ ಸದಸ್ಯರುಗಳನ್ನು ಕೆಲವು ಅಥವಾ ಇತರ ಕಾರಣಗಳಿಗಾಗಿ ಬಹಿಷ್ಕಾರ ಮಾಡುವ ಪದ್ಧತಿಯು ರೂಢಿಯಲ್ಲಿದ್ದು, ಅದನ್ನು ನಿಷೇಧಿಸುತ್ತದೆ. ಒಂದು ಗ್ರಾಮದ ಶಕ್ತಿವಂತ ಜನರು ಆ ಗ್ರಾಮದ ಕೆಳವರ್ಗದ ಜನರನ್ನು ಬಹಿಷ್ಕರಿಸುವುದು ಮತ್ತು ಆ ಗುಂಪುಗಳ ನಡುವೆ ವಿವಾದಗಳು ಉಂಟಾದಾಗ ಅವರು ಗ್ರಾಮದ ಬಾವಿಯನ್ನು ಉಪಯೋಗಿಸುವುದನ್ನು ನಿಷೇಧಿಸುವುದು ಅಥವಾ ಆ ಗ್ರಾಮದಲ್ಲಿನ ಅಂಗಡಿಗಳಿಂದ ಅವರ ದಿನಬಳಕೆಯ ವಸ್ತುಗಳನ್ನು ಖರೀದಿಸುವುದು ಮುಂತಾದುವುಗಳನ್ನು ನಿಷೇಧಿಸುವುದನ್ನು ವಾರ್ತಾ ಪತ್ರಿಕೆಗಳು ವರದಿ ಮಾಡಿವೆ. ಏಕ ಸದಸ್ಯ ಸಮಿತಿಯು ಅಂಥ ಪ್ರಕರಣಗಳಿಗೆ ಅನ್ವಯವಾಗುವಂತೆ ಮತ್ತು ಅಂಥ ಒಂದು ಗ್ರಾಮದಲ್ಲಿ ಅಂಥ ಪದ್ಧತಿಗಳನ್ನು ನಿಷೇಧಿಸುವುದಕ್ಕಾಗಿ ಇದನ್ನು ಇಡೀ ರಾಜ್ಯಕ್ಕೆ ವ್ಯಾಪಿಸುವುದು ಅಪೇಕ್ಷಣೀಯವೆಂದು ಸಲಹೆ ನೀಡಿದೆ.